

ಸಮುದ್ಯತಾ ವೆಂಕಟರಾಮು

ಕಲೆ: ವಿಶ್ವನಾಥ್ ಎ.ಎಸ್.

# ಇರುಳು ಬೆಳಕು



ಇರುಳ ಅಂಗಳದಲ್ಲೊಂದು
ಬೆಳಕ ಬೀಜ
ಮೇಲೆದ್ದು
ಅಂಗಳದ ತುಂಬೆಲ್ಲ ಬೆಳಕು

ಅಂಗಳದಿಂದ ಅಂಗಳಕೆ ಬೇರುಗಳು ದಾಟಿ
ಮತ್ತಲ್ಲಿ ಕುಡಿಯೊಡೆದು ಮಗದಷ್ಟು ಬೆಳಕಿನ ಗಿಡಗಳು
ಇರುಳೆಂಬ ಇರುಳಿಗೂ ಕಸಿವಿಸಿ

ಎಲ್ಲಿ ಅಡಗಲೆಂದು ತಾವ ಹುಡುಕುತ್ತ ಹುಡುಕುತ್ತ
ಬೆಳಕನ್ನೆ ತಿರು ತಿರುಗಿ ನೋಡುತ್ತ ನೋಡುತ್ತ
ಅಲ್ಲಲ್ಲೆ ಸಂದುಗೊಂದುಗಳಲ್ಲಿ
ಕಾಡ ಮರ ಬುಡದಲ್ಲಿ
ಜೋಪಡಿಗಳ ಖೋಲಿಗಳಲಿ
ಹೇಗೋ ಅಡಗಿ ಇರುಳೆಂಬ ಇರುಳು
ಬೆಳಕಾಗಿ ಹೋಯ್ತು.